ವಿಶಾಖ ಎನ್.



# ಹೊಸ ವರ್ಷಕೆ ಚಿತ್ರ ಭರವಸೆಗಳ ಮಹಾಪೂರ







ಹಿಂದಿ ಚಿತ್ರರಂಗ ‘ಧುರಂಧರ್’ ಯಶಸ್ಸಿನ ನಂತರ ಮೈ ಕೊಡವಿಕೊಂಡು ಮೇಲೆದ್ದು, ಹೊಸ ವರ್ಷವನ್ನು ಇದಿರುಗೊಂಡಿತು. ಈಗ ಅಲ್ಲಿನ ಸೂರ್ಯೋದಯ ಹಳೆಯ ಪಕ್ಕಾ ಕಿತ್ತಳೆ ಬಣ್ಣ ಪಡೆದುಕೊಂಡಿದೆ. ನಿರೀಕ್ಷೆಗಳ ಬಾನಕ್ಕಿಗಳ ಹಾರಾಟಕ್ಕೆ ಆ ಬಣ್ಣವೇ ಕ್ಯಾನ್ವಾಸ್. 2026ರಲ್ಲಿ ಹಿಂದಿ ಚಿತ್ರರಂಗ ಇನ್ನೂ ದೊಡ್ಡ ಮಟ್ಟದ ವಹಿವಾಟಿನ ಕನಸು ಕಟ್ಟಿಕೊಂಡಿರುವಾಗಲೇ ದಕ್ಷಿಣ ಭಾರತ ಚಿತ್ರರಂಗವೂ ತಾನು ಅಚ್ಚರಿಗಳ ಸಾಲು ನಿಲ್ಲಿಸುವ ಸೂಚನೆ ಕೊಟ್ಟಿದೆ. ತಲಪತಿ ವಿಜಯ್ ಕೊನೆಯ ಸಿನಿಮಾ ಎನ್ನುವ ಕಾರಣಕ್ಕೆ ನಿರೀಕ್ಷೆ ಮೂಡಿಸಿರುವ ‘ಜನ ನಾಯಗನ್’ ವರ್ಷದ ಭರ್ಜರಿ ಫಸಲಿಗೆ ಮುನ್ನುಡಿ ಹಾಡೀತೇ ಎನ್ನುವ ನಿರೀಕ್ಷೆ ಇದೆ. ಜನವರಿ 9ರಂದು ತೆರೆಗೆ ಬರುತ್ತಿರುವ ಈ ಸಿನಿಮಾದ ಪ್ರೀ ಬುಕ್ಕಿಂಗ್ ಅದಾಗಲೇ ಶುರುವಾಗಿದ್ದು, ಬೆಂಗಳೂರಿನ ಮೂಲೆ ಮೂಲೆಗಳ ಚಿತ್ರಮಂದಿರಗಳಲ್ಲೂ ಕಡಿಮೆ ಎಂದರೂ 800 ರೂಪಾಯಿ ದರ ಇಡಲಾಗಿದೆ. ಪ್ರಾರಂಭದಲ್ಲೇ ಹಣ ಕೊಳ್ಳೆ ಹೊಡೆಯುವ ಎಲ್ಲ ಸಾಧ್ಯತೆಗಳನ್ನೂ ಈ ಚಿತ್ರ ಕಾಣಿಸಿದೆ.

ಮಾರುತಿ ನಿರ್ದೇಶನದ ‘ದಿ ರಾಜಾ ಸಾಬ್’ ತೆಲುಗು ಚಿತ್ರವು ಪ್ರಭಾಸ್ ಹೊಸ ವರಸೆಯ ಕಾರಣಕ್ಕೆ ಕುತೂಹಲ ಮೂಡಿಸಿರುವ ಚಿತ್ರ. ಇದೂ ಜನವರಿಯಲ್ಲಿ ತೆರೆಕಾಣಲಿದ್ದು, ಪ್ರೇಕ್ಷಕರಿಗೆ ಹೊಸ ವರ್ಷಕ್ಕೆ ಸಿಕ್ಕಿರುವ ಬೋನಸ್ಸು.

ಈ ಸಿನಿಮಾಗಳು ಸಿಹಿ ಸುದ್ದಿ ನೀಡುತ್ತವೆಯೋ, ಕಹಿ ಅನುಭವ ಕೊಡುತ್ತವೆಯೋ ಎನ್ನುವುದರ ಹೊರತಾಗಿಯೂ ಮಾರ್ಚ್ ತಿಂಗಳಲ್ಲಿ ಚಿತ್ರರಂಗ ಕಳೆಗಟ್ಟಲಿರುವುದಂತೂ ದಿಟ. ನಿರ್ದೇಶಕಿ ಗೀತು ಮೋಹನ್ ದಾಸ್ ಹಾಗೂ ನಾಯಕ ಯಶ್ ನಡುವಿನ ಅಭಿಪ್ರಾಯಗಳಿಂದ ಈ ಹಿಂದೆ ಸುದ್ದಿಯಾಗಿದ್ದ ‘ಟಾಕ್ಸಿಕ್’, ಅದೇ ತಿಂಗಳು ತೆರೆಗೆ ಬರಲು ಸಜ್ಜಾಗಿದೆ. ಇಡೀ ದೇಶದ ಚಿತ್ರರಂಗ ಬೆರಗಿನಿಂದ ನೋಡುತ್ತಿರುವ ಚಿತ್ರವಿದು. ಅದೇ ತಿಂಗಳು ‘ಧುರಂಧರ್ 2’ ಬರಲಿರುವುದರಿಂದ ಎರಡರ ನಡುವೆ ಹೋಲಿಕೆಯೇ ಪ್ರೇಕ್ಷಕರಿಗೆ ವಸ್ತುವಾಗಲಿದೆ. ಗಳಿಕೆಯಲ್ಲಿ ಹಿಂದಿನ ದಾಖಲೆಗಳನ್ನೆಲ್ಲ ಚಿಂದಿ ಮಾಡಿರುವ ‘ಧುರಂಧರ್’ ತನ್ನ ಯಶಸ್ಸಿನ ಮೇಲೆಯೇ ಬ್ಯಾಂಕ್ ಮಾಡಿಕೊಂಡು ಎರಡನೇ ಭಾಗವನ್ನು ತೇಲಿ ಬಿಡಲಿದೆ. ನಿರ್ದೇಶಕ ರಾಮ್ ಗೋಪಾಲ್ ವರ್ಮಾ ಪ್ರಕಾರ, ದಕ್ಷಿಣ ಭಾರತದ ಸಿನಿಮಾಗಳು ಕೊಟ್ಟಿದ್ದ ಎಲ್ಲ ಪೆಟ್ಟುಗಳಿಗೂ ಈ ಸಿನಿಮಾ ದೊಡ್ಡದಾಗಿಯೇ ಪ್ರತಿ ಪೆಟ್ಟು ಕೊಟ್ಟಿದೆ.

ಸಂಜಯ್ ಲೀಲಾ ಬನ್ಸಾಲಿ ನಿರ್ದೇಶನದ ‘ಲವ್ ಆ್ಯಂಡ್ ವಾರ್’ ಈ ವರ್ಷದ ನಡುಘಟ್ಟದಲ್ಲಿ ತೆರೆಗೆ ಬರುವ ಸಾಧ್ಯತೆ ಇದೆ. ರಣಬೀರ್ ಕಪೂರ್, ಆಲಿಯಾ ಭಟ್, ವಿಕ್ಕಿ ಕೌಶಲ್ ಅಭಿನಯ ಇರುವ ಈ ಚಿತ್ರ ಹಳೆಯ ಸಂಜಯ್ ಲೀಲಾ ಬನ್ಸಾಲಿ ಫಾರ್ಮ್ ನೆನಪಿಸಲಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ.

ಯಶ್ ಪಾಲಿಗೆ ಈ ವರ್ಷ ‘ಟಾಕ್ಸಿಕ್’ ಒಂದೇ ಬತ್ತಳಿಕೆಯಲ್ಲಿ ಇಲ್ಲ; ‘ರಾಮಾಯಣ’ ಹಿಂದಿ ಚಿತ್ರದ ಮೊದಲ ಭಾಗವೂ ಇದೆ. ರಣಬೀರ್ ಕಪೂರ್, ಸಾಯಿ ಪಲ್ಲವಿ, ಯಶ್ ಅಭಿನಯದ ರಾಮಾಯಣದ ಕಥನದ ಈ ಚಿತ್ರವನ್ನು ನಿತೇಶ್ ತಿವಾರಿ ಕಣ್ಸೆಳೆಯುವ ಸಿ.ಜಿ. ಬಳಸಿ ನಿರ್ದೇಶಿಸುತ್ತಿದ್ದಾರೆ. ಬಹುಶಃ ದೀಪಾವಳಿ ಹೊತ್ತಿಗೆ ರಾಮಾಯಣದ ಈ ಪಟಾಕಿ ಸಿಡಿದೀತು. ಕಳೆದ ವರ್ಷ ಸಲ್ಮಾನ್ ಖಾನ್ ಹಾಗೂ ಶಾರುಕ್ ಖಾನ್ ನಟಿಸಿದ್ದ ಯಾವ ಚಿತ್ರವೂ ಬಿಡುಗಡೆಯಾಗಿರಲಿಲ್ಲ. ಈ ವರ್ಷ ಸಲ್ಮಾನ್ ಅಭಿನಯದ ‘ಬ್ಯಾಟಲ್ ಆಫ್ ಗಾಲ್ವಾನ್’ ಏಪ್ರಿಲ್‌ನಲ್ಲಿ ಚಿತ್ರಮಂದಿರಗಳನ್ನು ತುಂಬಿಕೊಳ್ಳಲಿದೆ. ಈಗಾಗಲೇ ಅದರ ಕುರಿತ ವಿವಾದ ಹೊಗೆಯಾಡಲು ಪ್ರಾರಂಭಿಸಿದೆ. ಶಾರುಕ್ ನಟನೆಯ ‘ಕಿಂಗ್’ ವರ್ಷದ ಎರಡನೇ ಅರ್ಧದಲ್ಲಿ ಬಿಡುಗಡೆಯಾಗುವ ಸಾಧ್ಯತೆ ಇದೆ.

ರಜನೀಕಾಂತ್ ನಟನೆಯ ‘ಜೈಲರ್ 2’ ತಮಿಳು ಚಿತ್ರ, ಕಮಲ ಹಾಸನ್ ಹಾಗೂ ರಜನಿ ಒಟ್ಟಾಗಿ ನಟಿಸಲಿರುವ ಇನ್ನೊಂದು ತಮಿಳು ಚಿತ್ರ, ಮೋಹನ್ ಲಾಲ್ ಹಾಗೂ ಮಮ್ಮೂಟಿ ತೆರೆ ಹಂಚಿಕೊಳ್ಳಲಿರುವ ಮಲಯಾಳ ಚಿತ್ರ, ರಾಮಚರಣ್ ಅಭಿನಯದ ತೆಲುಗಿನ ‘ಪೆದ್ದಿ’, ಪ್ರದೀಪ್ ರಂಗನಾಥನ್ ನಾಯಕ ಆಗಿರುವ, ತಮಿಳಿನ ‘ಲವ್ ಇನ್ಶೂರೆನ್ಸ್ ಕಂಪನಿ’, ಅದೇ ಭಾಷೆಯಲ್ಲಿ ಸೂರ್ಯ ನಟಿಸಿರುವ ‘ಕರುಪ್ಪು...’ ದಕ್ಷಿಣ ಭಾರತದ ಸಿನಿಮಾ ಶಕ್ತಿಗೆ ಕನ್ನಡಿ ಹಿಡಿಯಲು ಸಜ್ಜಾಗಿವೆ.

ಅನುರಾಗ್ ಕಶ್ಯಪ್ ನಿರ್ದೇಶನದ ‘ಬಂದರ್’ ಹಿಂದಿ ಚಿತ್ರದ ಕುರಿತು ನಟ ಬಾಬಿ ಡಿಯೋಲ್ ಅವರಿಗೆ ನಿರೀಕ್ಷೆ ಇದೆ. ವಿಶಾಲ್ ಭಾರದ್ವಾಜ್ ಆ್ಯಕ್ಷನ್ ಕಟ್ ಹೇಳಿರುವ ‘ಓ ರೋಮಿಯೋ’ ಚಿತ್ರದ ಕುರಿತೂ ಒಳ್ಳೆಯ ಮಾತುಗಳಿವೆ. ಈ ಬೆಳವಣಿಗೆ ಕಂಡರೆ ಚಿತ್ರರಂಗ ಹೊಸ ವರ್ಷದಲ್ಲಿ ನಿರೀಕ್ಷೆಗಳ ಗಟ್ಟಿ ಬೀಜಗಳನ್ನು ಬಿತ್ತಿರುವುದು ಸ್ಪಷ್ಟ. ಬೆಳೆ ಹೇಗೆ ಇರುವುದೋ, ಕಾದು ನೋಡೋಣ.